## ಯಾರು ತಂದಿದ್ದು?

ನನ್ನ ನಾಲ್ಕು ಚಿಲ್ಲರೆ ವರ್ಷದ ಮೊಮ್ಮಗ ಹೊರಗಿನಿಂದ ಏನಾದರೂ ತಿಂಡಿ ತಿನಿಸು ತಂದರೆ, ಯಾರು ತಂದಿದ್ದು ಎಂದು ಕೇಳುತ್ತಾನೆ. ಒಂದು ದಿನ ಅವನ ತಾಯಿ ಬಾದುಶ ಕೊಟ್ಟರು. 'ಇದನ್ನು ಯಾರು ತಂದಿದ್ದು?' ಎಂದ. ನಾವು ಯಾರು ಎನ್ನುವುದನ್ನು ಹೇಳುವುದು ಬೇಡವೆಂದು ಸುಮ್ಮನಿದ್ದೆವು. 'ಯಾರು... ಯಾರು...' ಎಂದು ಪೀಡಿಸಿದ. 'ನೀನೇ ಹೇಳು ನೋಡೋಣ' ಎಂದೆವು. ತಿನ್ನುವುದನ್ನು ಬಿಟ್ಟು ಎದ್ದು, 'ಇದನ್ನು ಯಾರು ತಂದಿದ್ದಾರೊ ಅವರೇ ನನಗೆ ತಿನ್ನಿಸಬೇಕು' ಎಂದ. ನಾನು ಎದ್ದು ತಿನ್ನಿಸಲು ಹೋದೆ. ಕೊನೆಗೂ ತಂದಿದ್ದು ಯಾರೆಂದು ಪತ್ತೆ ಹಚ್ಚಿದ. ಅವನ ಬುದ್ಧಿವಂತಿಕೆಗೆ ಎಲ್ಲರೂ ತಲೆಬಾಗಿದೆವು.

**ಕೆ. ಹೊನ್ನಪ್ಪ**



## ದೇವರ ಹಾರನ್!

ನಾನು ಪ್ರತಿದಿನ ಆಫೀಸಿಗೆ ಹೋಗುವ ರಸ್ತೆಯ ಬಲಬದಿಯಲ್ಲಿ ಏಕವಿರಾ ದೇವಿಯ ಪುಟ್ಟ ಮಂದಿರವಿದೆ. ಈ ಮಂದಿರವನ್ನು ಹಾದು ಹೋಗುವಾಗ ಎಲ್ಲರೂ ದೇವಿಗೆ ಕೈ ಮುಗಿಯುತ್ತೇವೆ. ಅಲ್ಲಿ ಬಸ್ಸಿನ ಡ್ರೈವರ್ ಕೂಡಾ ದಿನಾ ಒಂದು ಹಾರನ್ ಹೊಡೆಯುತ್ತಾನೆ. ಅದು ಆತ ತೋರುವ ಭಕ್ತಿಯ ವಿಧಾನವಿರಬಹುದೆಂದು ಊಹಿಸಿದ್ದೆ. ಆದರೆ, ಕ್ರಮೇಣ ಬೇರೆ ವಾಹನದ ಚಾಲಕರೂ ಆ ಸ್ಥಳದಲ್ಲಿ ಹಾರನ್ ಹೊಡೆಯುವುದನ್ನು ಗಮನಿಸಿ ಎಲ್ಲಾ ಚಾಲಕರೂ ದೇವರಿಗೆ ಭಕ್ತಿ ತೋರುತ್ತಾರೆ ಎಂದುಕೊಂಡೆ. ಕೆಲ ಸಮಯದ ನಂತರ ನಾನು ಡ್ರೈವಿಂಗ್ ತರಬೇತಿ ಪಡೆದ ಬಳಿಕ ಈ ಹಾರನ್ನಿನ ರಹಸ್ಯ ಪತ್ತೆಯಾಯಿತು! ಆ ದೇವಸ್ಥಾನದ ಮುಂದೆ ದೊಡ್ಡ ತಿರುವಿರುವ ಕಾರಣ ಚಾಲಕರು ಹಾರನ್ ಹೊಡೆಯುತ್ತಿದ್ದರು.

**ರಮಣ್ ಶೆಟ್ಟಿ ರೆಂಜಾಳ್**



ಕಲೆ: ಗಣೇಶ ಆಚಾರ್ಯ